

ಇದಿಷ್ಟೇ ನನ್ನ ಕತೆಯಲ್ಲ. ನನಗೆ ಪುಟ್ಟ ಮಕ್ಕಳೆಂದರೆ ಪಂಚಪ್ರಾಣ. ನನ್ನ ಮಾವುತ ಅಣ್ಣಯ್ಯ. ನಮ್ಮಿಬ್ಬರದು ಸಹೋದರ ಸಂಬಂಧ. ದುಬಾರೆಯಲ್ಲಿ ಸಫಾರಿ ಮಾಡುವಾಗ ತರಾವರಿ ಜನ ನನ್ನ ಬೆನ್ನು ಹತ್ತಿ ಕಾಡಲೆಯುತ್ತಾರೆ. ಆದರೆ, ಅವರ ಪೈಕಿ ಮಕ್ಕಳನ್ನು ಕೂರಿಸಿಕೊಳ್ಳುವುದು ಎಂದರೆ ನನಗೆ ತುಂಬಾ ಪ್ರೀತಿ. ನನ್ನ ಬೆನ್ನ ಮೇಲೆ ಮಕ್ಕಳನ್ನು ಕೂರಿಸಿ ನಿಶ್ಚಿಂತರಾಗಿರಬಹುದು. ಅವರನ್ನು ಕ್ಷೇಮವಾಗಿ ಸಫಾರಿ ತಿರುಗಾಡಿಸಿ ವಾಪಸು ಕರೆತಂದು ಬಿಡುತ್ತೇನೆ. ಎಷ್ಟೇ ಆದರೂ ನಮ್ಮ ಕನ್ನಡದ ಮಕ್ಕಳಲ್ಲವೇ? ನಾನೂ ಕನ್ನಡಿಗನೇ ಆದ ಕಾರಣ, ಅವರ ಪ್ರೀತಿ ಮಾತುಗಳು, ಅವರು ಮೈದಡುವ ರೀತಿ... ಆಹಾ, ಅದೆಷ್ಟು ಮುದ ನೀಡುತ್ತದೆ!

## ಬಂದೇ ಬಿಟ್ಟಿತು ಗ್ರಹಚಾರ!

ಇಂತಿಪ್ಪ ದುಬಾರೆ ಶಿಬಿರದಲ್ಲಿ ಸುಖವಾಗಿ ಅಡ್ಡಾಡಿಕೊಂಡಿದ್ದ ನನಗೆ ಇತ್ತೀಚೆಗೆ ಒಂದು ದಿನ ಗ್ರಹಚಾರ ಬಂತು! ಹೊಸ ವರ್ಷದ ಹುರುಪಿನಲ್ಲಿದ್ದ ನಮಗೆ ಕೆಟ್ಟ ಸುದ್ದಿ ಅಪ್ಪಳಿಸಿತು. ನಮ್ಮ ಕರ್ನಾಟಕ ಸರ್ಕಾರವು ಛತ್ತೀಸ್‌ಗಢ ಸರ್ಕಾರದೊಂದಿಗೆ ಒಪ್ಪಂದ ಮಾಡಿಕೊಂಡಿದೆಯಂತೆ; ಛತ್ತೀಸ್‌ಗಢದಲ್ಲಿ ಕಾಡಾನೆಗಳನ್ನು ಸೆರೆಹಿಡಿಯಲು ಕರ್ನಾಟಕದಿಂದ ಆನೆಗಳನ್ನು ಕಳುಹಿಸುತ್ತಾ-ರಂತೆ.. ಇತ್ಯಾದಿ. ನಮ್ಮನ್ನು ಒಂದು ಮಾತೂ ಕೇಳದೇ ಅದು ಹೇಗೆ ಇಂಥದಕ್ಕೆಲ್ಲಾ ಒಪ್ಪಿಕೊಳ್ಳುತ್ತಾರೆ ಸ್ವಾಮಿ?! ಹೋಗಬೇಕಾದವರು ನಾವು ತಾನೆ? ಪ್ರಾಣಿಗಳೆಂದರೆ ಅಷ್ಟು ಉಡಾಫೆಯೇ? ನಮಗೂ ಮನಸ್ಸಿರುತ್ತದೆ ಸ್ವಾಮಿ. ನಮಗೂ ಸ್ನೇಹಿತರು, ಬಂಧು– ಬಳಗ ಎಲ್ಲ ಇರುತ್ತಾರೆ. ಅವರನ್ನೆಲ್ಲಾ ಬಿಟ್ಟು ಹೋಗಬೇಕು ಎಂದರೆ ಹೇಗೆ? ಮನುಷ್ಯರಂತೆ ದುಡ್ಡಿನಾಸೆಗೆ, ಅಧಿಕಾರ ದಾಹಕ್ಕೆ ಹುಟ್ಟಿದ ಊರನ್ನೇ ಬಿಡುವಷ್ಟು ಶೀತರಕ್ತ ಪ್ರಾಣಿಗಳು ನಾವಲ್ಲ. ನಾವು ಇಲ್ಲೇ ಇದ್ದು ಇಲ್ಲೇ ಸಾಯುವವರು.

ಅಂತೂ ಆ ದಿನ ಬಂದೇ ಬಿಟ್ಟಿತು. ಜನವರಿ 23ನೇ ತಾರೀಖು. ಬೆಳಗಿನ ಚಳಿ ಕಳೆದು ಆಗ ತಾನೇ ಸೂರ್ಯನ ಎಳೆಬಿಸಿಲು ಮೈ ಸುಡುತ್ತಿದ್ದ ಸಮಯ. ದೊಡ್ಡ ದೇಹದ ಲಾರಿ ಬಂದು ನಿಂತೇ ಬಿಟ್ಟಿತು. ಪ್ರತಿದಿನ ಮೈದಡವುತ್ತಿದ್ದ ಖಾಕಿ ಬಟ್ಟೆಯ ನಮ್ಮ ಶಿಬಿರದ ಸಿಬ್ಬಂದಿ ನಮ್ಮನ್ನು ಶಿಬಿರದಿಂದ ಆಚೆ ತಳ್ಳಲು ಸಿದ್ಧರಾಗಿಬಿಟ್ಟಿದ್ದಾರೆ! ನನ್ನ ಜತೆಗಾರರಾದ ತೀರ್ಥರಾಮ ಹಾಗೂ ಪರಶು-ರಾಮ ಪಾಪ ತೀರಾ ಮುಗ್ಧರು. ಅವರ ಮಾಹುತರು ಅಪ್ಪಿಕೊಂಡು ಕಣ್ಣೀರು ಸುರಿಸುತ್ತ 'ಹೋಗಿಬಾ ತೀರ್ಥರಾಮ', 'ಹೋಗಿಬಾ ಪರಶುರಾಮ' ಎಂದು ಲಾರಿಗೆ ಹತ್ತಿಸಿದರು.

ನನ್ನ ಗೆಳೆಯರ ಕಣ್ಣೀರು ನನ್ನ ಎದೆಯನ್ನು ಚುಚ್ಚಿತು. ನನ್ನ ಮಾವುತ ಅಣ್ಣಯ್ಯನ ಕಣ್ಣಾಲಿ ಒದ್ದೆಯಾಗಿತ್ತು. ತಡೆದಿಟ್ಟ ಅವನ ಕಣ್ಣೀರು ರೆಪ್ಪೆಯಿಂದ ಕಳಚಿ ಭೂಮಿಗೆ ಬಿತ್ತು. ಈ ಭೂಮಿಯನ್ನು ನಾನು ಬಿಟ್ಟು ಹೋಗಬೇಕಾ? ನನಗೂ ಈ ಮಣ್ಣಿಗೂ ಋಣ ತೀರಿತಾ? ನನ್ನ ಎದೆಬಡಿತ ಹೆಚ್ಚಾಯಿತು. ನನ್ನ ಸರದಿ ಬಂದೇ ಬಿಟ್ಟಿತು. ಲಾರಿ ಹತ್ತಿದರೆ ಇಳಿಯುವುದು ಇನ್ನೆಲ್ಲೋ! ದುಬಾರೆಯ ಶಿಬಿರ, ಕೊಡಗಿನ ಕಾಡು ಎಲ್ಲವನ್ನೂ ಮನಸ್ಸಿನಿಂದಲೂ, ಹೃದಯದಿಂದಲೂ ಅಳಿಸಿ ಹಾಕಿದಂತೆಯೇ. ಹೀಗಾದ ಮೇಲೆ ನಾನು ಬದುಕಿಯೂ ಸತ್ತಂತೆ. ಇಲ್ಲ, ನಾನು ಈ ಮಣ್ಣನ್ನು ಬಿಡಲಾರೆ..!

ನಾನು ಲಾರಿ ಹತ್ತುವುದು ಬೇಡ ಎಂದು ನಿರ್ಧರಿಸಿದೆ. ಸಿಬ್ಬಂದಿ ಹಿಂದಿನಿಂದ ತನ್ನನ್ನು ತಳ್ಳಲು ಆರಂಭಿಸಿದರು. ನಾನು ನಿಂತಲ್ಲಿಂದ ಕದಲಲಿಲ್ಲ. ನನ್ನ ಮನವೊಲಿಸಲು ಶತ ಪ್ರಯತ್ನಗಳು ನಡೆದವು. ನನ್ನ ಗೆಳೆಯ ಅಭಿಮನ್ಯುವನ್ನೂ ಕರೆತಂದರು. ಅವನಿಂದ ನನ್ನನ್ನು ಲಾರಿಯೊಳಗೆ ತಳ್ಳಲು ನೋಡಿದರು. ಇನ್ನು ಸುಮ್ಮನಿದ್ದರೆ ನನ್ನ ಕತೆ ಮುಗಿದಂತೆಯೇ ಎಂದು ಖಚಿತವಾದ ನನಗೆ ಕೋಪ ನೆತ್ತಿಗೇರಿತು. ಕಾಲಿಗೆ ಕಟ್ಟಿದ್ದ ಸರಪಳಿಯನ್ನು ತುಂಡರಿಸಿ ಅಲ್ಲಿಂದ ಓಟ ಕಿತ್ತೆ.

ನಾನೇನು ಶಿಬಿರದಿಂದ ಓಡಿ ಹೋಗಲಿಲ್ಲ. ನನಗೆ ಮಾನವರ ಮೇಲೆ ದ್ವೇಷವಿಲ್ಲ. ಅವರೂ ನನ್ನ ಅಣ್ಣ ತಮ್ಮಂದಿರೇ. ನಮ್ಮ ಶಿಬಿರದ ಸಿಬ್ಬಂದಿ ಸರ್ಕಾರ ತೆಗೆದುಕೊಳ್ಳುವ ನಿರ್ಧಾರಗಳನ್ನು ಪಾಲಿಸುವ ಆಜ್ಞಾಪಾಲಕರಷ್ಟೇ. ಅವರದೂ ಹೊಟ್ಟೆ ಪಾಡು ನೋಡಿ. ನನ್ನ ಪ್ರತಿಭಟನೆಯನ್ನು ದಾಖಲಿಸ-ಬೇಕಿತ್ತಷ್ಟೇ. ಪಕ್ಕದಲ್ಲಿ ಕಾವೇರಿ ಪ್ರಸನ್ನಳಾಗಿ ಹರಿಯುತ್ತಿದ್ದಳು. ಪ್ರತಿಭಟನೆಗೆ ಸಾಥ್ ನೀಡುವವಳು ಅವಳೊಬ್ಬಳೇ. ಅವಳಿಗೆ ನಮಸ್ಕರಿಸಿ ನದಿಯೊಳಗೆ ನಡೆದೆ. ನದಿಯ ಮಧ್ಯಕ್ಕೆ ಹೋಗಿ ನಿಂತೆ. ದಡಕ್ಕೆ ಬಂದ ಸಿಬ್ಬಂದಿ ಅಲ್ಲಿಂದಲೇ ಮನವೊಲಿಸಲು ಪ್ರಯತ್ನಿಸಿದರು. ನನ್ನ ಬಳಿಗೂ ಬಂದರು. ಜಾಗ ಬದಲಿಸಿದೆ. ಬೇರೆಡೆ ಹೋಗಿ ನಿಂತೆ. ತಲೆ ಮಾತ್ರ ಆಚೆ ಕಾಣುವಂತೆ ಆಳ ನೀರಿನಲ್ಲಿ ನಿಂತೆ. ಎಷ್ಟೇ ಹೊತ್ತಾಗಲಿ ಇಲ್ಲಿಂದ ಕದಲಬಾರದು ಎಂದು ತೀರ್ಮಾನಿಸಿದೆ.

ಅತ್ತ ಲಾರಿಯ ಮೇಲೆ ತೀರ್ಥರಾಮ, ಪರಶುರಾಮನನ್ನು ನಿಲ್ಲಿಸಿಕೊಂಡು ಎಷ್ಟು ಹೊತ್ತು ಕಾಯಲಾಗುತ್ತದೆ? ಅವರನ್ನು ಹೊತ್ತ ಲಾರಿ ಶಿಬಿರದಿಂದ ಹೊರ ಸಾಗಿತು. ಅವರಿಗೆ ವಿದಾಯ ಹೇಳಲೂ ಸಾಧ್ಯವಾಗದ ನನ್ನ ಪರಿಸ್ಥಿತಿಗೆ ನನ್ನ ಕಣ್ಣಲ್ಲಿ ನೀರಿಳಿದು ಕಾವೇರಿಯಲ್ಲಿ ಕರಗಿತು. ಪ್ರಾಣಿಗಳಿಗೆ ಎಂತಹ ದುರ್ಗತಿ! ಅವರಿಬ್ಬರೂ ಪರದೇಸಿಗಳಾಗಿ ಅದ್ಯಾವುದೋ ರಾಜ್ಯದ ಕಾಡಿನಲ್ಲಿ ಆನೆ ಹಿಡಿಯಲು ಹೋಗುತ್ತಿದ್ದಾರಲ್ಲ... ಆನೆಗಳನ್ನು ಆನೆಗಳಿಂದಲೇ ಹಿಡಿಸಿ ಆನೆಗಳಿಂದಲೇ ಹೊರದಬ್ಬುವ ಈ ವ್ಯವಸ್ಥೆ ಅದೆಷ್ಟು ಕ್ರೂರ? ನಾಗರಿಕ ಸಮಾಜದಲ್ಲಿ ಪ್ರಾಣಿಗಳಿಗೂ ಸಮಾನ ಪಾಲು ಯಾವಾಗ?

ಕಾವೇರಿಯ ಬೆಚ್ಚನೆಯ ನೀರು ತಂಪಾಗಲಾರಂಭಿಸಿತು. ಕೆಂಪನೆಯ ಸೂರ್ಯ ಕಾವೇರಿಯಲ್ಲಿ ಬಿದ್ದು, ಇನ್ನೆಲ್ಲಿ ಮೇಲೇಳಲು ಹೊರಟನೊ ನಾ ಕಾಣೆ. ಕತ್ತಲಾಯಿತು. ನಾನಿನ್ನು ಆಚೆ ಬರುವುದಿಲ್ಲ ಎಂದು ಖಾತರಿಯಾದ ಸಿಬ್ಬಂದಿ ವಾಪಸಾದರು. ನನ್ನನ್ನು ಇನ್ನು ಸಾಗಹಾಕಲು ಸಾಧ್ಯವಿಲ್ಲ ಎನ್ನುವುದನ್ನು ಖಚಿತಪಡಿಸಿಕೊಂಡ ನಾನು, ನಿಧಾನವಾಗಿ ಹೆಜ್ಜೆ ಇಡುತ್ತಾ ದಡ ಮುಟ್ಟಿದೆ. ಕಳ್ಳಹಜ್ಜೆ ಹಾಕುತ್ತ ಬಂದು ಶಿಬಿರ ಸೇರಿಕೊಂಡೆ.

ಇವೆಲ್ಲಾ ಘಟಿಸಿ ಈಗ ಎರಡು ವಾರ ಕಳೆದಿದೆ. ನನ್ನ ಹುಟ್ಟೂರಿನ ಪ್ರೀತಿ ಮಾನವರಿಗೂ ಗೊತ್ತಾಗಿರಬೇಕು. ನನ್ನನ್ನು ಇಲ್ಲಿಂದ ಕಳುಹಿಸುವುದು ಬೇಡ ಎಂಬ ತೀರ್ಮಾನವಾಗಿದೆ. ಇದು ನನಗೆ ಸಂತಸದ ಸುದ್ದಿ. ದುಬಾರೆಯ ಪರಿಸರದಲ್ಲಿ ಓಡಾಡಿಕೊಂಡು ನನ್ನ ಮಣ್ಣಿನ ವಾಸನೆಯನ್ನು ಜೀವವಿರುವ-ವರೆಗೂ ಆನಂದಿಸುತ್ತೇನೆ. ಹೇಳಿ, ನಾನು ಮಾಡಿದ್ದು ತಪ್ಪಾ?